I/362358/2022

**ಕರ್ನಾಟಕ ಸರ್ಕಾರ**
**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರಕಚೇರಿ
Office of the
Principal Chief Conservator of Forests
(Head of Forest Force)

ಅರಣ್ಯಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru-03
Telephone: 080 23367123
Email:apccfpr@gmail.com

E-Office No. KFD/HOFF/B3(EST)/133/2019-PnR-KFD **E - 93137**
ದಿನಾಂಕ:29-12-2022.

## ಅಧಿಕೃತ ಜ್ಞಾಪನಾ

**ವಿಷಯ :** ದಿನಾಂಕ:01-01-2020ರಿಂದ 09-12-2021ರವರೆಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Kalyan-Karnataka Cadre) -HK– ವಾಹನ ಚಾಲಕರ (Driver) ರಾಜ್ಯ ಮಟ್ಟದ ಕರಡು ಜ್ಯೇಷ್ಠತ ಪಟ್ಟಿ (Draft Seniority List)ಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ :**
1. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957 ರ ನಿಯಮ 10.
2. ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ.ಸಿಆಸುಇ 106 ಸೇನೆನಿ 2021, ದಿನಾಂಕ:10-12-2021.

### ಪ್ರಸ್ತಾವನೆ:-

1. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ಪ್ರತಿಯೊಂದು ಸಾಲಿನಲ್ಲಿ ಪ್ರತಿಯೊಂದು ವೃಂದದಲ್ಲಿನ ಅಧಿಕಾರಿ/ಸಿಬ್ಬಂದಿಗಳ ಜ್ಯೇಷ್ಠತ ಪಟ್ಟಿ (Seniority List)ಯನ್ನು ತಯಾರಿಸುವುದು ಕಡ್ಡಾಯವಾಗಿರುತ್ತದೆ.

2. ಈ ಮಧ್ಯೆ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 106 ಸೇನೆನಿ 2021 ದಿನಾಂಕ:10.12.2021ರಲ್ಲಿ *"ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಅನುಪಾತ/ಪ್ರತಿ ಶತಪ್ರಮಾಣವನ್ನು ನಿಗದಿಪಡಿಸಿದ್ದಲ್ಲಿ, ನಿಗದಿಪಡಿಸಿದ ಅನುಪಾತ/ಪ್ರತಿಶತದನ್ವಯ ಹುದ್ದೆ ಆದಾರಿತವಾಗಿ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗಳಿಗೆ ಒಟ್ಟು ಹುದ್ದೆಗಳನ್ನು ವರ್ಗೀಕರಣ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಆ ವೃಂದದಲ್ಲಿನ ಶಾಶ್ವತ ಹುದ್ದೆಗಳ ಜೊತೆಗೆ ತಾತ್ಕಾಲಿಕ ಹುದ್ದೆಗಳು ಸಹ ಒಳಗೊಂಡಿರುತ್ತವೆ. ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆಗಳನ್ನು ಮೇಲ್ಕಂಡಂತೆ ವರ್ಗೀಕರಿಸಿದ ನಂತರ ನೇರ ನೇಮಕಾತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ಮುಂಬಡ್ತಿಯಿಂದಲೇ ಭರ್ತಿಮಾಡತಕ್ಕದ್ದು "*ಎಂದು ತಿಳಿಸಲಾಗಿದೆ. ಮುಂದುವರೆದು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:DPAR 48 SSR 75 ದಿನಾಂಕ:05.07.1976ರಲ್ಲಿ ಬ್ಲಾಕ್ ಅವಧಿಯನ್ನು ವಿಂಗಡಿಸುವ ಕುರಿತು ಮಾರ್ಗ ಸೂಚಿಗಳನ್ನು ನಿಗದಿಪಡಿಸಿದ್ದು, ಈ ಅಧಿಕೃತ ಜ್ಞಾಪನದ ಕಂಡಿಕೆ3 (c)ರಂತೆ ನೇರ ನೇಮಕಾತಿ ಮತ್ತು ಬಡ್ತಿಯ ನಡುವೆ ಅನುಪಾತವು ದಿನಾಂಕ:10.12.2021ರ ಆದೇಶದಂತೆ ಬದಲಾವಣೆಗೊಂಡಿದ್ದರಿಂದ ದಿನಾಂಕ:01.01.2020ರಿಂದ ಆರಂಭವಾಗುವ ಬ್ಲಾಕ್ ಅವಧಿಯನ್ನು ದಿನಾಂಕ:09.12.2021ಕ್ಕೆ ಮುಕ್ತಾಯಗೊಳಿಸಬೇಕಾಗಿರುತ್ತದೆ.

3. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ಹಾಗೂ ಸರ್ಕಾರಿ ಆದೇಶಗಳು/ಸುತ್ತೋಲೆಗಳನ್ನು ಅನುಸರಿಸಿ ದಿನಾಂಕ:01-01-2020 ರಿಂದ

I/362358/2022

09-12-2021ರವರೆಗಿನ ಅವಧಿಯಲ್ಲಿ 'ವಾಹನ ಚಾಲಕ (Driver)' ವೃಂದದಲ್ಲಿ ಇಲಾಖೆಯಲ್ಲಿ ಯಾವುದೇ ನೇಮಕಾತಿಗಳು ಆಗಿರುವುದಿಲ್ಲ. ಆದಾಗ್ಯೂ ದಿನಾಂಕ:01-01-2020 ರಿಂದ 09-12-2021ರವರೆಗಿನ ಅವಧಿಗೆ ಸದರಿ ವೃಂದದ ರಾಜ್ಯ ಮಟ್ಟದ ಕರಡು ಜ್ಯೇಷ್ಠತ ಪಟ್ಟಿ (Draft Seniority List)ಯನ್ನು ಅನುಬಂಧದಲ್ಲಿ ಶೂನ್ಯ ಮಾಹಿತಿಯೊಂದಿಗೆ ಪ್ರಕಟಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ದಿನಾಂಕ:01-01-2020ರಿಂದ 09-12-2021ರವರೆಗಿನ ಅವಧಿಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Kalyan-Karnataka Cadre) - 'ವಾಹನ ಚಾಲಕ (Driver)' ವೃಂದದ ರಾಜ್ಯ ಮಟ್ಟದ ಕರಡು ಜ್ಯೇಷ್ಠತ ಪಟ್ಟಿ (Draft Seniority List)ಯನ್ನು ಅನುಬಂಧದಲ್ಲಿ ಪ್ರಕಟಿಸಿ ಆದೇಶಿಸಿದೆ.

ಈ ಕರಡು ಜ್ಯೇಷ್ಠತ ಪಟ್ಟಿಯ ಕುರಿತು ಬಾದಿತರಾದವರು ಆಕ್ಷೇಪಣೆಗಳನ್ನು **ಸ್ಪಷ್ಟ ರೀತಿಯಲ್ಲಿ ಪೂರಕ ಸಮರ್ಥನೀಯ ದಾಖಲಾತಿಗಳೊಂದಿಗೆ** ಇಲಾಖೆಯ ವೆಬ್‌ಸೈಟ್ www.aranya.gov.inರಲ್ಲಿ ಈ ಆದೇಶವನ್ನು ಪ್ರಕಟಿಸಿದ 21 ದಿನಗಳೊಳಗಾಗಿ ಈ ಕಚೇರಿಯ ಸಂಬಂಧಿಸಿದ ಶಾಖೆಯ ಇ-ಮೇಲ್ ವಿಳಾಸ "b3section2016@gmail.com"ರ ಮೂಲಕ ಸಲ್ಲಿಸಬಹುದಾಗಿದೆ.

ಇತರೆ ಮಾದ್ಯಮದ *[ಭೌತಿಕವಾಗಿ/ ಬೇರೆ ಇ-ಮೇಲ್ ಗಳಿಗೆ/ ದೂರವಾಣಿ/ ಸಾಮಾಜಿಕ ಮಾದ್ಯಮ (Social media) ಮುಂತಾದ ಇತರೆ ಮಾದ್ಯಮಗಳ]* ಮೂಲಕ ಕಳುಹಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಅಲ್ಲದೇ, ಅಸ್ಪಷ್ಟ ಆಕ್ಷೇಪಣೆಗಳನ್ನು ಹಾಗೂ ನಿಗದಿತ ದಿನಾಂಕ ಮೀರಿ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**Signed by Raj Kishore Singh, Ifs**
**Date: 31-12-2022 15:49:08**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ, ಮುಖ್ಯಸ್ಥರು)

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
2. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಬೆಂಗಳೂರು- ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
4. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
6. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
7. ಎಲ್ಲಾ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ.
8. ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.

9. ಎಲ್ಲಾ ವಲಯ ಅರಣ್ಯ ಅಧಿಕಾರಿಗಳಿಗೆ – *ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ.*
10. ಎಲ್ಲಾ ವಾಹನ ಚಾಲಕ (Driver) ವೃಂದದ ಸಿಬ್ಬಂದಿಗಳಿಗೆ – ಇಲಾಖಾ ವೆಬ್‌ಸೈಟ್ ನಲ್ಲಿ ಈ ಪ್ರಕಟಣೆ ಮೂಲಕ.

I/362364/2022

# ಅನುಬಂಧ -1
# ಭಾಗ-1

## ಹುದ್ದೆಗಳ ವಾಸ್ತವಿಕ ಮಾಹಿತಿ

**ದಿನಾಂಕ: 01.01.2020 ರಿಂದ09.12.2021 ರವರೆಗಿನ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Kalyan-Karnataka Cadre) - 'ವಾಹನ ಚಾಲಕ (Driver)' ರಾಜ್ಯ ಮಟ್ಟ ವೃಂದದ ಕರಡು ಜ್ಯೇಷ್ಠತ ಪಟ್ಟಿ (Draft Seniority List)**

| ಕ್ರ. ಸಂ | ವೃಂದದ ಹೆಸರು | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಿಸಲಾದ ಹುದ್ದೆಗಳ ಸಂಖ್ಯೆ | | ವಾಸ್ತವವಾಗಿ ಭರ್ತಿಮಾಡಲಾದ ಹುದ್ದೆಗಳ ಸಂಖ್ಯೆ | | ಹುದ್ದೆಗಳ ಅನುಪಾತ (Quota) ಮತ್ತು ಭರ್ತಿ ಮಾಡಲಾದ ಹುದ್ದೆಗಳ ನಡುವಿನ ಸಂಖ್ಯಾ ವ್ಯತ್ಯಾಸ | | | | ವಾಸ್ತವವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆ | | ಷರಾ |
|---|---|---|---|---|---|---|---|---|---|---|---|---|
| | | | | | | ಹೆಚ್ಚುವರಿ | | ಕೊರತೆ | | | | |
| | | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | ವಾಹನ ಚಾಲಕ (Driver) | 21 | 0 | 0 | 0 | 0 | 0 | 21 | 0 | 21 | 0 | - |

Signed by Raj Kishore Singh, Ifs
Date: 31-12-2022 15:50:34

ದಿನಾಂಕ:29-12-2022

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ ಮುಖ್ಯಸ್ಥರು)

I/362366/2022

# ಅನುಬಂಧ-2

**ನೇರ ನೇಮಕಾತಿ ಅಥವಾ ಮುಂಬಡ್ತಿ ಮುಖಾಂತರ ಒಂದೇ ವಿಧಾನದಿಂದ ನೇಮಕಾತಿ ಮಾಡುವ ವೃಂದಗಳಿಗೆ ದಿನಾಂಕ:01-01-2020 ರಿಂದ 09-12-2021 ರವರೆಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Kalyan-Karnataka Cadre) - ವಾಹನ ಚಾಲಕ (Driver) ವೃಂದದ ರಾಜ್ಯ ಮಟ್ಟದ ಕರಡು ಜ್ಯೇಷ್ಠತಾ ಪಟ್ಟಿ (Draft Seniority List).**

1. **ಇಲಾಖೆ:** ಕರ್ನಾಟಕ ಅರಣ್ಯ ಇಲಾಖೆ
2. **ವೃಂದದ ಹೆಸರು:** ವಾಹನ ಚಾಲಕ (Driver) **ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ (ಶಾಶ್ವತ ಮತ್ತು ತಾತ್ಕಾಲಿಕ ಹುದ್ದೆಗಳೆರಡೂ ಒಳಗೊಂಡಂತೆ):** 21
3. **ನೇಮಕಾತಿ ನಿಯಮಗಳ ಅನುಸಾರ ನೇಮಕಾತಿ ವಿಧಾನ:** ನೇರ ನೇಮಕಾತಿ

**ದಿನಾಂಕ: 01.01.2020 ರಿಂದ 09.12.2021 ರವರೆಗಿನ ವಾಹನ ಚಾಲಕ (Driver) ರಾಜ್ಯ ಮಟ್ಟ ವೃಂದದ ಕರಡು ಜ್ಯೇಷ್ಠತ ಪಟ್ಟಿ (Draft Seniority List)**

| ಕ್ರ. ಸಂ. | ಹೆಸರು | ಮೀಸಲಾತಿ ವರ್ಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಾಸ್ತವವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
|---|---|---|---|---|---|---|
| 01-01-2020ರಿಂದ 09-12-2021ರ ವರೆಗೆ ಯಾವುದೇ ನೇರ ನೇಮಕಾತಿಯ ಪ್ರಕಿಯೆಯು ನಡೆದಿರುವುದಿಲ್ಲ. ಆದುದರಿಂದ ಮಾಹಿತಿಯು ಶೂನ್ಯವಾಗಿರುತ್ತದೆ. | | | | | | |

ದಿನಾಂಕ:29-12-2022

Signed by Raj Kishore Singh, Ifs
Date: 31-12-2022 15:51:06

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ ಮುಖ್ಯಸ್ಥರು)